ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ, ಬೇಲೂರು, ನ್ಯಾಯಾಲಯ, ಬೇಲೂರು.

ಸಿಸಿ ನಂಬರ್‌ಃ **88/2018**

ಪಿರ್ಯಾದುದಾರರು ಃ ರಾಜ್ಯ ಸರ್ಕಾರದ ಪರವಾಗಿ
ಅಬಕಾರಿ ಇಲಾಖೆ

ವಿರುದ್ಧ

ಆರೋಪಿ ಃ ಶ್ರೀಮತಿ ಸುಮಿತ್ರ ಕೋಂ ರವಿ, **30** ವರ್ಷ,
ವಾಸಃ- ಹಲ್ಮಿಡಿ ಗ್ರಾಮ, ಕಸಬಾ ಹೋಬಳಿ,
ಬೇಲೂರು ತಾಲ್ಲೂಕು, ಹಾಸನ ಜಿಲ್ಲೆ.

ದಂಡ ಪ್ರಕ್ರಿಯಾ ಸಂಹಿತೆ ಕಲಂ **313** ರಡಿಯಲ್ಲಿ ಆರೋಪಿ ಹೇಳಿಕೆ

ಪ್ರಶ್ನೆ ಃ **1** ಃ ನ್ಯಾಯಾಲಯದಲ್ಲಿ ಅಭಿಯೋಜನೆಯ ಪರ ವಿಚಾರಣೆ ಮಾಡಿದ ಸಾಕ್ಷಿದಾರರು ನುಡಿದ ಸಾಕ್ಷ್ಯವನ್ನು ಕೇಳಿ ತಿಳಿದುಕೊಂಡಿದ್ದೀರಾ ?

ಉತ್ತರಃ

ಪ್ರಶ್ನೆ ಃ **2** ಃ ಪ್ರಾಸಾ-**1** ಶ್ರೀ ಸಿ.ಆರ್. ದೇವರಾಜು, ಅಬಕಾರಿ ಹಿರಿಯ ರಕ್ಷಕರು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ **13.04.2017** ರಂದು ಅಬಕಾರಿ ನಿರೀಕ್ಷಕರಾದ ಚಾಸಾ-**5** ಬೇಲೂರು ತಾಲ್ಲೂಕಿನಲ್ಲಿ ಗಸ್ತು ಇದ್ದ ಸಮಯದಲ್ಲಿ ಬೆಳಗ್ಗೆ **9.00** ಗಂಟೆಗೆ ಬೇಲೂರು ತಾಲೂಕಿನ ಹಲ್ಮಿಡಿ ಗ್ರಾಮದಲ್ಲಿ ಅಕ್ರಮವಾಗಿ ಕಳ್ಳಭಟ್ಟಿ ಸಾರಾಯಿ ತಯಾರಿಸಿ ಮಾರಾಟ ಮಾಡುತ್ತಿದ್ದಾರೆ ಎಂಬ ಮಾಹಿತಿ ಮೇರೆಗೆ ಹಲ್ಮಿಡಿ ಗ್ರಾಮಕ್ಕೆ ಹೋಗಿ ಇಬ್ಬರು ಪಂಚರು ಚಾಸಾ-**1** ಮತ್ತು **2** ರವರನ್ನು ಕರೆದುಕೊಂಡು ಆರೋಪಿ ಮನೆಯ ಹತ್ತಿರ ಹೋದೆವು ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದರ ಬಗ್ಗೆ ನೀವೇನಾದರೂ ಹೇಳುವುದು ಇದೆಯಾ?

ಉತ್ತರ ಃ

ಪ್ರಶ್ನೆ ಃ **3** ಃ ಪ್ರಾಸಾ-**1** ಶ್ರೀ ಸಿ.ಆರ್. ದೇವರಾಜುರವರು ಮುಂದುವರೆದು, ನಂತರ ಆರೋಪಿಗೆ ನಾವು ಬಂದ ವಿಷಯ ತಿಳಿಸಿ ಪಂಚರ ಸಮಕ್ಷಮ ಮನೆಯನ್ನು ಪ್ರವೇಶಿಸಿ ಮನೆಯನ್ನು ಶೋಧನೆ ಮಾಡಿದಾಗ **5** ಲೀ

ಸಾಮಾರ್ಥ್ಯದ ಕ್ಯಾನ್ ನಲ್ಲಿ 5 ಲೀ ನಷ್ಟು ಕಳ್ಳಭಟ್ಟಿ ಸಾರಾಯಿ, 15 ಲೀ ಸಾಮಾರ್ಥ್ಯದ 2 ಪ್ಲಾಸ್ಟಿಕ್ ಕೊಡಗಳಲ್ಲಿ ತಲಾ 15 ಲೀ ನಷ್ಟು ಬೆಲ್ಲದ ಕೊಳೆ ಇರುವುದು ಕಂಡು ಬಂತು. ಪಂಚರ ಸಮಕ್ಷಮ ರಾಸಾಯಿನಿಕ ಪರೀಕ್ಷೆಗಾಗಿ ಕಳ್ಳಭಟ್ಟಿ ಸಾರಾಯಿ 500ಎಂ ಎಲ್ ನಷ್ಟುನ್ನು ಮತ್ತು 2 ಕೊಡಗಳಿಂದ 1 ಬಾಟಲಿಯಲ್ಲಿ 500 ಎಂ ಎಲ್ ನಷ್ಟು ಬೆಲ್ಲದ ಕೊಳೆಯನ್ನು ಮಾದರಿಗಾಗಿ ತೆಗೆದು ಬಟ್ಟೆ ಸುತ್ತಿ ದಾರ ಕಟ್ಟಿ ಚೀಟಿ ಅಂಟಿಸಿ ಪಂಚರ ಸಹಿ ಪಡೆದು ಮಹಜರ್ ಕ್ರಮವನ್ನು ಬೆಃ9.10 ರಿಂದ 10.30 ಗಂಟೆಯವರೆಗೆ ಜರುಗಿಸಿರುತ್ತೇವೆ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದರ ಬಗ್ಗೆ ನೀವೇನಾದರೂ ಹೇಳುವುದು ಇದೆಯಾ?

ಉತ್ತರ ಃ

ಪ್ರಶ್ನೆ ಃ 4 ಃ ಪ್ರಾಸಾ-4 ಶ್ರೀ ವೆಂಕಟೇಶ್ ಹೆಚ್.ಕೆ., ಅಬಕಾರಿ ಉಪನಿರೀಕ್ಷಕರು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ 15.10.2017 ರಂದು ಅಬಕಾರಿ ನಿರೀಕ್ಷಕರಾಗಿದ್ದ ಶ್ರೀ ಎಂ.ಕೆ.ಕೇಶವಮೂರ್ತಿ ರವರಿಂದ ಈ ಪ್ರಕರಣದ ಕಡತವನ್ನು ಪಡೆದಿರುತ್ತೇನೆ. ದಿನಾಂಕ 16.10.2017 ರಂದು ರಾಸಾಯಿನಿಕ ವರದಿಯನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತೇನೆ. ದಿನಾಂಕ 09.11.2017 ರಂದು ನಾರಾಯಣಪುರ ಗ್ರಾಮ ಪಂಚಾಯಿತಿ ರವರಿಂದ ಮಾಲೀಕತ್ವದ ವಿವರದ ಪತ್ರವನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿನಾಂಕ 05.12.2017 ರಂದು ಆರೋಪಿಯ ವಿರುದ್ಧ ಆರೋಪ ಸಾಭೀತಾದ ಕಾರಣ ಅಂತಿಮ ದೋಷರೋಪಣ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದರ ಬಗ್ಗೆ ನೀವೇನಾದರೂ ಹೇಳುವುದು ಇದೆಯಾ?

ಉತ್ತರ ಃ

ಪ್ರಶ್ನೆ ಃ 5 ಃ ಪ್ರಾಸಾ-5 ಶ್ರೀಮತಿ ಅನಿತ ಎಂ.ಜೆ., ಅಬಕಾರಿ ನಿರೀಕ್ಷಕರು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ 13.04.2017 ರಂದು ಬೇಲೂರು ಟೌನ್ ನಲ್ಲಿ ಗಸ್ತಿನಲ್ಲಿ ಇದ್ದಾಗ ಸುಮಾರು ಬೆಳಗ್ಗೆ 8.35 ಗಂಟೆಗೆ ಹಲ್ಮಿಡಿ ಗ್ರಾಮದ ಸುಮಿತ್ರ ಕೋಂ ರವಿ ಎಂಬುವವರು ಅಕ್ರಮವಾಗಿ ಕಳ್ಳಭಟ್ಟಿ ಸಾರಾಯಿ ತಯಾರಿಸಿ ಮಾರಾಟ ಮಾಡುತ್ತಿದ್ದಾರೆ ಎಂದು ಮಾಹಿತಿ ಬಂದಿರುತ್ತದೆ. ನಂತರ ಹಲ್ಮಿಡಿ ಗ್ರಾಮಕ್ಕೆ ಬಂದು ಚಾಸಾ-1 ಮತ್ತು 2 ರವರಿಗೆ ವಿಷಯ ತಿಳಿಸಿ ದಾಳಿ ವೇಳೆಯಲ್ಲಿ ಪಂಚರಾಗಿ

ಸಹಕರಿಸಬೇಕು ಎಂದು ಕೋರಿದ ಮೇರೆಗೆ ಅವರು ಒಪ್ಪಿಕೊಂಡಿರುತ್ತಾರೆ. ನಾನು ಚಾಸಾ-1 ಮತ್ತು 2 ರವರನ್ನು ಕರೆದುಕೊಂಡು ಆರೋಪಿ ಮನೆಯ ಹತ್ತಿರ ಹೋಗಿ ಕೂಗಿ ಕರೆದಾಗ ಒಬ್ಬ ಮಹಿಳೆ ಹೊರ ಬಂದಿದ್ದು, ಆಕೆಯ ಹೆಸರು ಕೇಳಿದಾಗ ಸುಮಿತ್ರ ಕೋಂ ರವಿ ಎಂದು ತಿಳಿಸಿದರು ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದರ ಬಗ್ಗೆ ನೀವೇನಾದರೂ ಹೇಳುವುದು ಇದೆಯಾ?

ಉತ್ತರ ಃ

ಪ್ರಶ್ನೆ ಃ 6 ಃ ಪ್ರಾಸಾ-5 ಶ್ರೀಮತಿ ಅನಿತ ಎಂ.ಜೆ.ರವರು ಮುಂದುವರೆದು, ನಂತರ ಮಾಹಿತಿ ಬಂದ ವಿಷಯ ತಿಳಿಸಿ, ನ್ಯಾಯಾಲಯದಿಂದ ಶೋಧನ ವಾರೆಂಟ್ ಪಡೆಯಲು ಕಾಲಾವಕಾಶ ಇಲ್ಲದ ಕಾರಣ ಅಬಕಾರಿ ಕಾಯ್ದೆ ಕಲಂ 54 ರಡಿಯಲ್ಲಿ ಸ್ಥಳದಲ್ಲೇ ಶೋಧನಾ ಸಮುಚಿತ ಆಧಾರ ತಯಾರಿಸಿ ಸಿಬ್ಬಂದಿ ಮತ್ತ ಪಂಚರ ಸಮಕ್ಷಮ ಅಂಗ ಶೋಧನೆ ಮಾಡಿಕೊಂಡು ಮನೆ ಪ್ರವೇಶಿಸಿದಾಗ ಮನೆಯಲ್ಲಿ 5 ಲೀ ಸಾಮರ್ಥ್ಯದ ಪ್ಲಾಸ್ಟಿಕ್ ಕ್ಯಾನ್ ನಲ್ಲಿ 5 ಲೀ ನಷ್ಟು ಕಳ್ಳಭಟ್ಟಿ ಸಾರಾಯಿ ಹಾಗೂ 15 ಲೀ ಸಾಮರ್ಥ್ಯದ 2 ಪ್ಲಾಸ್ಟಿಕ್ ಕೊಡಗಳಲ್ಲಿ 30 ಲೀ ಬೆಲ್ಲದ ಕೊಳೆ ಇರುವುದು ಕಂಡುಬಂದಿರುತ್ತದೆ. ಆರೋಪಿ ಸದರಿ ಸ್ವತ್ತುಗಳು ತನಗೆ ಸೇರಿದ್ದು, ಮಾರಾಟ ಮಾಡುವ ಉದ್ದೇಶಕ್ಕಾಗಿ ಹೊಂದಿರುವುದಾಗಿ ತಿಳಿಸಿರುತ್ತಾರೆ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದರ ಬಗ್ಗೆ ನೀವೇನಾದರೂ ಹೇಳುವುದು ಇದೆಯಾ?

ಉತ್ತರ ಃ

ಪ್ರಶ್ನೆ ಃ 7 ಃ ಪ್ರಾಸಾ-5 ಶ್ರೀಮತಿ ಅನಿತ ಎಂ.ಜೆ.ರವರು ಮುಂದುವರೆದು, ಸದರಿ ಸ್ವತ್ತಿನ ಪೈಕಿ ಬೆಲ್ಲದ ಕೊಳೆಯಿಂದ 500 ಎಂ.ಎಲ್. ಕಳ್ಳಭಟ್ಟಿ ಸಾರಾಯಿಯಿಂದ 500 ಎಂ.ಎಲ್.ಅನ್ನು ಬಾಟಲ್ ಗೆ ಮಾದರಿಗಾಗಿ ತೆಗೆದು, ಮುಚ್ಚಳದಿಂದ ಮುಚ್ಚಿ ಬಿಳಿ ಬಟ್ಟೆಯಿಂದ ಸುತ್ತಿ ದಾರದಿಂದ ಕಟ್ಟಿ ಇಲಾಖಾ ಸೀಲನ್ನು ಜರುಗಿಸಲಾಯಿತು. ಮಾದರಿ ಚೀಟಿ ತಯಾರಿಸಿ ಪಂಚರ ಸಹಿ ಪಡೆದು ಸದರಿ ಮಾದರಿಗಳ ಮೇಲೆ ಅಂಟಿಸಲಾಯಿತು. ಮಾದರಿ ನಕಲನ್ನು ತಯಾರಿಸಿ ಮುದ್ದೆ ಮಾಲುಗಳಿಗೆ ಅಂಟಿಸಲಾಯಿತು ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದರ ಬಗ್ಗೆ ನೀವೇನಾದರೂ ಹೇಳುವುದು ಇದೆಯಾ?

ಉತ್ತರ ಃ

ಪ್ರಶ್ನೆ **ಃ 8 ಃ** ಪ್ರಾಸಾ**-5** ಶ್ರೀಮತಿ ಅನಿತ ಎಂ.ಜೆ.ರವರು ಮುಂದುವರೆದು, ಕೃತ್ಯ ನಡೆದ ಸ್ಥಳದ ಪೂರ್ವಕ್ಕೆ ಖಾಲಿ ಜಾಗ, ಪಶ್ಚಿಮಕ್ಕೆ ಹಿತ್ತಲು, ಉತ್ತರಕ್ಕೆ ಗಲ್ಲಿ, ದಕ್ಷಿಣಕ್ಕೆ ರಸ್ತೆ ಇರುವುದು ಕಂಡುಬರುತ್ತದೆ. ಮಹಜರನ್ನು ಬೆಳಗ್ಗೆ **9.10** ರಿಂದ **10.30** ಗಂಟೆವರೆಗೆ ಬರೆದಿರುತ್ತೇನೆ. ನಂತರ ಮುದ್ದೆ ಮಾಲಿನೊಂದಿಗೆ ಕಚೇರಿಗೆ ಬಂದು ಪ್ರಥಮ ವರ್ತಮಾನ ವರದಿಯನ್ನು ಹಾಗೂ ಇನ್ನಿತರೆ ದಾಖಲಾತಿಗಳನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ನಂತರ ಪ್ರಕರಣದ ಕಡತವನ್ನು ಚಾಸಾ**-6** ರವರಿಗೆ ಹಸ್ತಾಂತರಿಸಿರುತ್ತೇನೆ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದರ ಬಗ್ಗೆ ನೀವೇನಾದರೂ ಹೇಳುವುದು ಇದೆಯಾ**?**

ಉತ್ತರ **ಃ**

ಪ್ರಶ್ನೆ ಃ **9** ಃ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನೀವೇನಾದರೂ ಹೇಳುವುದು ಇದೆಯಾ**?**
ಉತ್ತರ ಃ

ಪ್ರಶ್ನೆ ಃ **10** ಃ ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಇದೆಯಾ**?**

ಉತ್ತರ ಃ

ಪ್ರಶ್ನೆ ಃ **11** ಃ ನಿಮ್ಮ ಪರವಾಗಿ ಯಾವುದಾದರೂ ದಾಖಲಾತಿಯನ್ನು ಹಾಜರು ಪಡಿಸುವಿರಾ**?**
ಉತ್ತರ ಃ

**(ಮೇಲ್ಕಂಡ ಅಂಶಗಳನ್ನು ಆರೋಪಿಗೆ ಓದಿ ಹೇಳಿ ನಂತರ ಅವರು ನೀಡಿದ ಉತ್ತರವನ್ನು ಬರೆದುಕೊಂಡು ಸರಿಯಾಗಿದೆ ಎಂದು ಧೃಡೀಕರಿಸಿದೆ)**

ದಿನಾಂಕ ಃ **06.03.2026**
ಸ್ಥಳ ಃ ಬೇಲೂರು

(ಶ್ರೀ.ನಾಗೇಂದ್ರ.)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ
ಬೇಲೂರು.